# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ 590 018, ಕರ್ನಾಟಕ ರಾಜ್ಯ

ಡಾ|| ಹೆಚ್. ಎನ್. ಜಗನ್ನಾಥ ರೆಡ್ಡಿ ಬಿ.ಇ.,ಎಂ.ಇ., ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ: (0831) – 2405468
ಫ್ಯಾಕ್ಸ್ ಸಂ : (0831) - 2405467

ಉಲ್ಲೇಖ ಸಂ. : ವಿತಾವಿ/ಬಿಜಿಎಂ/ಡಿಪಿಎಆರ್/ಸಿಆರ್(4)/52/2018-19/1117 ದಿನಾಂಕ

## ಸುತ್ತೋಲೆ

ವಿಷಯ : ದಿನಾಂಕ 20-10-2018 ರಂದು ವಿ.ತಾ.ವಿ.ಯ ಕಛೇರಿಗಳಿಗೆ ರಜೆಯನ್ನು ಘೋಷಿಸಿ ಬದಲಿಗೆ ದಿನಾಂಕ 08-12-2018 ರಂದು ವಿ.ತಾ.ವಿ.ಯ ಕಛೇರಿಗಳಿಗೆ ಕರ್ತವ್ಯದ ದಿನವೆಂದು ಘೋಷಿಸುವುದರ ಕುರಿತು.

ಉಲ್ಲೇಖ : ಕಂಡಿಕೆ (28) ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 15-10-2018.

ಮಹಾನವಮಿ, ಆಯುಧ ಪೂಜೆ ಹಾಗೂ ವಿಜಯದಶಮಿ ಹಬ್ಬದ ಪ್ರಯುಕ್ತ ದಿನಾಂಕ **18-10-2018** ಮತ್ತು **19-10-2018** ರಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಛೇರಿಗಳಿಗೆ ರಜೆ ಇದ್ದು, ದಿನಾಂಕ **20-10-2018** ರಂದು ಕರ್ತವ್ಯದ ದಿನ ಇರುತ್ತದೆ. ಆದ್ದರಿಂದ, ವಿ.ತಾ.ವಿ.ಯ ಸಿಬ್ಬಂದಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಎಲ್ಲ ಕಛೇರಿಗಳು, ಸ್ನಾತಕೋತ್ತರ ಕೇಂದ್ರಗಳು, ಪ್ರಾದೇಶಿಕ ಕಛೇರಿಗಳು ಇತ್ಯಾದಿ ವಿಭಾಗಗಳಿಗೆ ಹಾಗೂ ಘಟಕ ಕಾಲೇಜಾದ ದಾವಣಗೆರೆಯ ಯು.ಬಿ.ಡಿ.ಟಿ ಇಂಜನೀಯರಿಂಗ್ ಕಾಲೇಜ್‌ಗೆ ಈ ಕೆಳಗಿನಂತೆ ರಜೆಯನ್ನು ಘೋಷಿಸಲಾಗಿದೆ.

ದಿನಾಂಕ **20-10-2018** ರಂದು ರಜೆಯನ್ನು ಘೋಷಿಸಿ, ಈ ದಿನದ ಬದಲಾಗಿ ಎರಡನೇ ಶನಿವಾರ ದಿನಾಂಕ **08-12-2018** ರಂದು ಕರ್ತವ್ಯದ ದಿನವೆಂದು ಘೋಷಿಸಲಾಗಿದೆ.

ಸ್ನಾತಕೋತ್ತರ ಕೇಂದ್ರಗಳಾದ, ಬೆಳಗಾವಿ, ಮೈಸೂರು, ಮುದ್ದೇನಹಳ್ಳಿ, ಕಲಬುರಗಿ ಹಾಗೂ ಘಟಕ ಯುಬಿಡಿಟಿ ಇಂಜನಿಯರಿಂಗ್ ಕಾಲೇಜ್, ದಾವಣಗೆರೆ ಈ ಕಛೇರಿಗಳಿಗೂ ಸಹ ದಿನಾಂಕ **08-12 -2018 ರಂದು ಪೂರ್ಣದಿನ ಕರ್ತವ್ಯದ ದಿನವಾಗಿರುತ್ತದೆಂದು ಸೂಚಿಸಲಾಗಿದೆ.**

ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರು ಈ ಸುತ್ತೋಲೆಯನ್ನು ತಮ್ಮ ವಿಭಾಗದ ಸಿಬ್ಬಂದಿ ವರ್ಗದವರೆಲ್ಲರ ಗಮನಕ್ಕೆ ತರಬೇಕಾಗಿ ವಿನಂತಿ.

16.10.18

ಕುಲಸಚಿವರು

16/10 16/10

ಪ್ರತಿಯನ್ನು ಮಾಹಿತಿಗಾಗಿ :

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಕುಲಸಚಿವರು (ಮೌಲ್ಯಮಾಪನ), ವಿ.ತಾ.ವಿ., ಬೆಳಗಾವಿ.
3. ಹಣಕಾಸು ಅಧಿಕಾರಿಗಳು, ವಿ.ತಾ.ವಿ., ಬೆಳಗಾವಿ.
4. ಪ್ರಾಚಾರ್ಯರು, ಯು.ಬಿ.ಡಿ.ಟಿ. ಇಂಜನೀಯರಿಂಗ್ ಕಾಲೇಜ್, ದಾವಣಗೆರೆ.
5. ಪ್ರಭಾರಿ ಪ್ರಾದೇಶಿಕ ನಿರ್ದೇಶಕರು, ವಿ.ತಾ.ವಿ.ಯ ಪ್ರಾದೇಶಿಕ ಕಛೇರಿಗಳಾದ ಬೆಳಗಾವಿ, ಮೈಸೂರು, ಬೆಂಗಳೂರು ಹಾಗೂ ಕಲಬುರಗಿ, ಇವರಿಗೆ ತಮ್ಮ ಪ್ರಾದೇಶಿಕ ಕಛೇರಿಯ ಅಧೀನದಲ್ಲಿರುವ ಎಲ್ಲ ವಿಭಾಗಗಳ ಮುಖ್ಯಸ್ಥರ ಗಮನಕ್ಕೆ ತರಲು ಸೂಚಿಸಲಾಗಿದೆ.
6. ಸಂಯೋಜಕರು, ವಿ.ತಾ.ವಿ.ಯ ಸ್ನಾತಕೋತ್ತರ ಕೇಂದ್ರ, ಬೆಳಗಾವಿ, ಮೈಸೂರು, ಕಲಬುರಗಿ ಹಾಗೂ ಮುದ್ದೇನಹಳ್ಳಿ.
7. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಧಾನ ಕಛೇರಿಯ ಆವರಣದಲ್ಲಿರುವ ಎಲ್ಲಾ ಕಛೇರಿಗಳ ಮುಖ್ಯಸ್ಥರುಗಳಿಗೆ.
8. ನಿರ್ದೇಶಕರು, ವಿ.ತಾ.ವಿ.ಯ ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ಕೇಂದ್ರ, ದಾಂಡೇಲಿ ಹಾಗೂ ಮುದ್ದೇನಹಳ್ಳಿ.
9. ವಿಶೇಷಾಧಿಕಾರಿಗಳು, ಸಿ.ಎನ್.ಸಿ., ವಿ.ತಾ.ವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

Visvesvaraya Technological